ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ವಿಧಾನ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ

ದಿನಾಂಕ : DATE : 02/07/20

## ಸ್ಪೀಕರ್ ನಡೆ ಮುಂದೇನು

# ರಾಜೀನಾಮೆ ಅಂಗೀಕಾರ ಆಗುತ್ತಾ? ತಿರಸ್ಕೃತವಾಗುತ್ತಾ?

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಜಯನಗರ ಕಾಂಗ್ರೆಸ್ ಶಾಸಕ ಆನಂದ್ ಸಿಂಗ್ ಹಾಗೂ ಗೋಕಾಕ್ ಕಾಂಗ್ರೆಸ್ ಶಾಸಕ ರಮೇಶ್ ಜಾರಕಿಹೊಳಿ ಅವರ ರಾಜೀನಾಮೆಯ ಭವಿಷ್ಯದ ಬಗ್ಗೆ ಕುತೂಹಲ ಮೂಡಿದ್ದು, ರಾಜೀನಾಮೆ ಅಂಗೀಕಾರವು ವಿಳಂಬವಾಗಬಹುದೇ ಹೊರತು ಸ್ಪೀಕರ್ ಅವರಿಗೆ ರಾಜೀನಾಮೆ ತಿರಸ್ಕರಿಸುವ ಅಧಿಕಾರವಿಲ್ಲ ಎಂದು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.



ರಾಜೀನಾಮೆ ಅಂಗೀಕಾರಕ್ಕೆ ಕಾಲಮಿತಿ ಇಲ್ಲ

ನಿಯಮಬದ್ಧ ವಾಗಿದ್ದರೆ ರಾಜೀನಾಮೆ ಅಂಗೀಕರಿಸಬೇಕು

ವಿಧಾನಸಭೆ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಾವಳಿ ಪ್ರಕಾರ ವಿಧಾನ ಸಭೆ ಅಧ್ಯಕ್ಷರಿಗೆ ನಿಯಮಬದ್ಧವಾಗಿರುವ ಶಾಸಕರ ರಾ ಜೀ ನಾ ಮೆ ಯ ನ್ನು ತಿರಸ್ಕರಿಸಲು ಅವಕಾಶವಿಲ್ಲ. ಬದಲಿಗೆ ಚುನಾವಣೆ ಹಾಗೂ ಮರು ಚುನಾವಣೆಯಿಂದ ಸಾರ್ವಜನಿಕರ ಹಣ ವ್ಯಯವಾಗುವ ಬಗ್ಗೆ ಶಾಸಕರ ಗಮನಕ್ಕೆ ತಂದು ಮರು ಚಿಂತನೆಗೆ ಅವಕಾಶ ನೀಡಬಹುದು. ಮೊದಲಿಗೆ ಸ್ಪೀಕರ್ ಅವರು ರಾಜೀನಾಮೆ ನೀಡಿದ ಶಾಸಕರು ತಮ್ಮ ಮುಂದೆ ಹಾಜರಾಗುವಂತೆ ಸೂಚಿಸಬಹುದು.

ತಮ್ಮನ್ನು ಭೇಟಿ ಮಾಡಿದ ವೇಳೆ ರಾಜೀನಾಮೆಗ ಕಾರಣವನ್ನು ನೇರವಾಗಿ ಕೇಳಿ ತಿಳಿದುಕೊಂಡು, ಮರು ಚಿಂತನೆಗೆ ಕಾಲಾವಕಾಶ ನೀಡಬಹುದು. ಕ್ಷೇತ್ರದ ಮತದಾರರ ಅಭಿಪ್ರಾಯ ಪಡೆಯುವುದು ಸೇರಿದಂತೆ ಕೆಲವು ಪ್ರಕ್ರಿಯೆ ಹೆಸರಿನಲ್ಲಿ ಅಂಗೀಕಾರವನ್ನು ವಿಳಂಬ ಮಾಡಬಹುದು.

ಇಲ್ಲಿ ಕುತೂಹಲಕಾರಿ ಸಂಗತಿಯೆಂದರೆ ಸ್ಪೀಕರ್ ಅವರು ರಾಜೀನಾಮೆ ಅಂಗೀಕಾರಕ್ಕೆ ನಿರ್ದಿಷ್ಟ ಸಮಯ ನಿಗದಿಪಡಿಸಲಾಗಿಲ್ಲ.

ಹೀಗಾಗಿ ಸ್ಪೀಕರ್ ಅವರು ಕೆಲಕಾಲ ರಾಜೀನಾಮೆಯನ್ನು ಮುಂದೂಡುವ ಅವಕಾಶವಿದೆ. ಆದರೆ; ಅಂತಿಮವಾಗಿ ವಿಧಾನ ಸಭೆ ನಿಯಮಾವಳಿಗಳ ನಿಯಮ -202ರಲ್ಲಿ ನಿಗದಿಪಡಿಸಿರುವ ನಮೂನೆ ಪ್ರಕಾರ ಇದೆಯೇ ಎಂಬುದನ್ನು ಪರಿಶೀಲಿಸಿ ಅಂಗೀಕರಿಸಬೇಕಾಗುತ್ತದೆ. ಒಂದು ವೇಳೆ ನಿಯಮಬದ್ಧವಾಗಿಲ್ಲ ಎಂದಾದರೆ, ಸ್ಪಷ್ಟೀಕರಣ ಬಯಸಬಹುದು. ನಿಯಮಬದ್ಧವಾಗಿದ್ದರೆ ಸಂವಿಧಾನದ ಅನುಚ್ಛೇದ 190 (3)ಬಿ ಯಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ ಸ್ಪೀಕರ್ ಅವರು ರಾಜೀನಾಮೆ ಅಂಗೀಕರಿಸಿ, ರಾಜ್ಯಪಾಲರಿಗೆ ಪ್ರಸ್ತಾವನೆ ಕಳುಹಿಸಬೇಕಾಗುತ್ತದೆ.